ಓ ಎಸ್ ನಂಬರ 77/2013
ಪಿ. ಡಬ್ಲ್ಯೂ -1

**ದಿನಾಂಕ: 01.08.2026.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ ಜಿ ಕೆ ವಕೀಲರಿಂದ:**

12. ನನ್ನ ತಂದೆ ಶಿವಬಸ್ಸಪ್ಪ ರವರು ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ.ಅವರು ಸುಮಾರು ಅಂದಾಜು 50 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನನ್ನ ತಾಯಿ ಶಿವಬಸ್ಸಪ್ಪ ಸುಮಾರು ಅಂದಾಜು 35 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಸರ್ವೇ ಸಂಖ್ಯೆ 171 ಮತ್ತು 172 ಆಸ್ತಿಗಳು ನಾನು ಹಾಗೂ ಪ್ರತಿವಾದಿ ಸಂಖ್ಯೆ 2 ಮತ್ತು 3 ರವರು ಹಾಗೂ ಮೃತ ವಿರುಪಾಕ್ಷಪ್ಪ ರವರು ಸೇರಿ ಖರೀದಿಸಿದ ಆಸ್ತಿಗಳಾಗಿರುತ್ತವೆ. ಮೃತ ವಿರುಪಾಕ್ಷಪ್ಪ ರವರು ಖರೀದಿ ಕಾಲಕ್ಕೆ ಯಾವುದೇ ಹಣವನ್ನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ಅವರು ಯಾವುದೇ ಹಣವನ್ನು ಪಾವತಿಸದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವಿರುಪಾಕ್ಷಪ್ಪ ರವರ ಜನನ ದಿನಾಂಕ ನನನಗೆ ಗೊತ್ತಿಲ್ಲ. ಸದರಿಯವರು ದಿನಾಂಕ 02.04.1938 ರಲ್ಲಿ ಜನಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೃತ ವಿರುಪಾಕ್ಷಪ್ಪ ರವರು ನನ್ನ ತಂದೆಯ ಮೊದಲನೇ ಮಗ ಎಂದರೆ ಸರಿ. ಅವರ ನಂತರ ಮೃತ ಪ್ರತಿವಾದಿ ಸಂಖ್ಯೆ 1 ರವರು ಇರುತ್ತಾರೆ ಎಂದರೆ ಸರಿ. ನಮ್ಮ ಮನೆತನದ ಒಕ್ಕಲುತನವನ್ನು ಮೃತ ವಿರುಪಾಕ್ಷಪ್ಪ ರವರೇ ಮಾಡುತ್ತಿದ್ದರು. ಮೃತ ವಿರುಪಾಕ್ಷಪ್ಪ ರವರು ಯಾವುದೇ ಒಕ್ಕಲುತನವನ್ನು ಮಾಡುತ್ತಿರಲಿಲ್ಲ, ಮೂಲತಃ 1ನೇ ಪ್ರತಿವಾದಿಯವರು ಮಾಡುತ್ತಿದ್ದರು ಎಂದರೆ ಸರಿಯಲ್ಲ.

13. ಮನೆ ಸಂಖ್ಯೆ 554 ಹಾಗೂ 556 ಖುಲ್ಲಾ ಜಾಗ ನಮ್ಮ ಮನೆತನಕ್ಕೆ ಸೇರಿರುತ್ತದೆ ಎಂದರೆ ಸರಿ. ಈ ಎರಡು ಆಸ್ತಿಗಳನ್ನು ನನ್ನ ತಾಯಿಯ ಹೆಸರಿನಲ್ಲಿ 1941 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ಈ ಎರಡು ಆಸ್ತಿಗಳನ್ನು ದಾವೆಯಲ್ಲಿ ಸೇರಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ಅವು ನನ್ನ ತಾಯಿಯ ಸ್ವಯಾರ್ಜಿತ ಆಸಿತಗಳಾಗಿರುವುದರಿಂದ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಎರಡು ಆಸ್ತಿಗಳನ್ನು ನನ್ನ ತಂದೆ ತಾಯಿಗೆ ತಿಳಿಯದ ರೀತಿಯಲ್ಲಿ ನನ್ನ ಹೆಸರಿಗೆ ದಾಖಲು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎರಡು ಆಸ್ತಿಗಳು ನಮ್ಮ ಮನೆತನದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ.

14. ಮೃತ ವಿರುಪಾಕ್ಷಪ್ಪ ರವರಿಗೆ ಯಾವುದೇ ಸ್ವಂತ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ಒಕ್ಕಲುತನ ಮಾಡುತ್ತಿದ್ದರು. ಸದರಿಯವರು 1998 ರಿಂದ 2005 ರವರಿಗೆ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ನಿಪಿ 11 ರಿಂದ 78 ದಾಖಲೆಗಳನ್ನು ಚಿಕ್ಕಪುಟ್ಟ ಖಾಯಿಲೆಗಳಿಗೆ ತೋರಿಸಿದ ದಾಖಲೆಗಳಾಗಿರುತ್ತವೆ. ಸದರಿ ದಾಖಲೆಗಳು ಅವರ ಚರ್ಮರೊಗಕ್ಕೆ ಸಂಬಂಧಿಸಿದ ದಾಖಲೆಗಳಾಗಿರುತ್ತವೆ ಎಂದರೆ ಸಾಕ್ಷಿಯು ಅವುಗಳೊಂದಿಗೆ ಬೇರೆ ಖಾಯಿಲೆಗಳ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಬೈಲಹೊಂಗಲದ ಚಾಟೆ ಆಸ್ಪತ್ರೆಗೆ ಸಂಬಂಧಿಸಿದ ದಾಖಲಾತಿಗಳನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 11 ರಿಂದ 78 ದಾಖಲೆಗಳ ಕುರಿತು ವೈದ್ಯರ ಸಾಕ್ಷ್ಯವನ್ನು ಮಾಡಿಸುವ ಅವಶ್ಯಕತೆ ಇರುವುದಿಲ್ಲ.

15. ಮೃತ ವಿರುಪಾಕ್ಷಪ್ಪ ರವರು ಮಾಡಿದ ವಿಲ್ ಬಗ್ಗೆ ಶಂಕ್ರೆಪ್ಪ ನಂಜಪ್ಪನ್ನವರ ರವರು ತಿಳಿಸಿರುತ್ತಾರೆ. ಸದರಿ ವಿಲ್ ಮನೆ ಸಂಖ್ಯೆ 554 ಹಳೆಯ ಟ್ರಂಕ್ ನಲ್ಲಿ ಸಿಕ್ಕಿರುತ್ತದೆ. ಸದರಿ ಮನೆಯಲ್ಲಿ ನಾವು ಅವರೊಂದಿಗೆ ವಾಸವಿದ್ದೇವು. ಸದರಿ ವಿಲ್ ಸಿಕ್ಕಾಗ ನಾನು ನನ್ನ ಪತ್ನಿ ಇದ್ದೇವು. ಸದರಿ ವಿಲ್ ನ್ನು ಬರೆಯಲು ಯಾರು ಮುಂದಾಳತ್ವ ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ವಿಲ್ ನ ಬಾಂಡನ್ನು ಯಾರು ಎಲ್ಲಿಂದ ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಲ್ ನ್ನು ಎಲ್ಲಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನಂಜಪ್ಪನವರಿಂದ ಕೇಳಿ ತಿಳಿದುಕೊಂಡಿರುವುದಿಲ್ಲ.

16. ಸದರಿ ಮೃತ್ಯು ಪತ್ರಕ್ಕೆ ಸಂಬಂಧಿಸಿದ ಇಬ್ಬರು ಸಾಕ್ಷಿದಾರರಾದ ವಡಬಾಳಪ್ಪಗೋಳ ಹಾಗೂ ನಾವಲಗಟ್ಟಿ ರವರ ಸಾಕ್ಷಿ ಮಾಡಿಸಿರುತ್ತೇನೆ. ಸದರಿಯವರು ನಮಗೆ ಬೇಕಾದಂತಹ ಸಾಕ್ಷಿದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರದ ಬಾಂಡನ್ನು ದಿನಾಂಕ 18.01.2003 ರಂದು ನಿಸಾರ್ ಸನದಿ ರವರ ಮೂಲಕ ನಾನೇ ಬೆಳಗಾವಿಯಲ್ಲಿ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನಾಂಕ 23.01.2003 ಮೃತ್ಯು ಪತ್ರ ಮಾಡಿಕೊಂಡ ಸಮಯದಲ್ಲಿ ಮೃತ ವಿರುಪಾಕ್ಷಪ್ಪ ರವರು ಓಡಾಡುವ ಪರಿಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಆಗ ಅವರು ಮಾನಸಿಕವಾಗಿ ಬಳಲುತ್ತಿದ್ದರು ಎಂದರೆ ಸರಿಯಲ್ಲ .

17. ನಾನು ಖೊಟ್ಟಿ ಬಾಂಡನ್ನು ಪಡೆದುಕೊಂಡು ವಿರುಪಾಕ್ಷಪ್ಪ ರವರ ಮೃತ್ಯು ಪತ್ರವನ್ನು ಸಾಕ್ಷಿದಾರರೊಂದಿಗೆ ಶಾಮೀಲಾಗಿ ಖೊಟ್ಟಿಯಾಗಿ ಸೃಷ್ಟಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮೃತ ವಾದಿ ಸಂಖ್ಯೆ 2ರವರಿಗೆ ಮೃತ್ಯು ಪತ್ರವನ್ನು ಮಾಡಿಕೊಡುವ ಉದ್ದೇಶವನ್ನು ವಿರುಪಾಕ್ಷಪ್ಪ ರವರು ಹೊಂದಿರುವ ಬಗ್ಗೆ ಪ್ರತಿವಾದಿಯರಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಹೆಚ್ಚಿನ ಭಾಗವನ್ನು ಪಡೆಯುವ ಉದ್ದೇಶದಿಂದ ಖೊಟ್ಟಿ ಮೃತ್ಯು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮೃತ 2ನೇ ವಾದಿಗೂ ಸಹ ದಾವೆಯನ್ನು ಸಲ್ಲಿಸುವ ಯಾವುದೇ ಉದ್ದೇಶ ಇಲ್ಲದೇ ಇದ್ದರೂ ಸಹ ನಾನು ಹಾಗೂ ಅವರು ಶಾಮೀಲಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

18. ಗ್ರಾಮ ಪಂಚಾಯತಿ ಸಂಖ್ಯೆ 37, 554 ಹಾಗೂ 556ನೇದ್ದವುಗಳನ್ನು ನಾವೇ ಕಬಳಿಸುವ ಉದ್ದೇಶದಿಂದ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಖೊಟ್ಟಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ